# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 603/2022**

| | | |
|---|---|---|
| ಸಾಕ್ಷಿದಾರರ ಹೆಸರು | ಚಿಕ್ಕನಾಯಕ | ಪ್ರಮಾಣ ವಚನ ಬೋಧಿಸಿದ<br>ದಿನಾಂಕಃ 08.10.2024 |
| ತಂದೆಯ ಹೆಸರು/ ಗಂಡನ ಹೆಸರು | ಕರಿನಾಯಕ | |
| ವಯಸ್ಸು | 45 ವರ್ಷ | |
| ಉದ್ಯೋಗ | ಕೂಲಿ | ಫ್ರಾಸಾಃ 5 |
| ವಾಸ | ಬೊಮ್ಮಲಾಪುರ ಗ್ರಾಮ | ಚಾಸಾಃ 5 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು ನಿಪಿ–2 ಮಹಜರ್ ನ್ನು ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

ಈಗ್ಗೆ ಎರಡು ವರ್ಷಗಳ ಹಿಂದೆ ಬೊಮ್ಮಲಾಪುರ ಬಸ್ ಸ್ಟಾಂಡ್ ನಲ್ಲಿ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮಹಜರ್ ಗೆ ಮತ್ತೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಈಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿರವರಿಂದಃ**

ದಿಃ 15.02.2022 ರಂದು ಬೊಮ್ಮಲಾಪುರ ಗ್ರಾಮದ ಗೋವಿಂದರಾಜು ರವರ ಹಣ್ಣಿನ ಅಂಗಡಿಯ ಮುಂಭಾಗ ಗುಂಡ್ಲುಪೇಟೆ ಪೊಲೀಸ್ ಠಾಣೆಯ ಮುಖ್ಯ ಪೇದೆ ರಮೇಶ್.ಜಿ. ರವರು ನನ್ನನ್ನು ಹಾಗೂ ಬಸವರಾಜು ಎಂಬುವರನ್ನು ಸ್ಥಳ ಮಹಜರ್ ಗಾಗಿ ಬರಮಾಡಿಕೊಂಡು ಕೇಸಿನ ವಿಚಾರವನ್ನು ತಿಳಿಸಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಪಿರ್ಯಾದಿ ಗೋವಿಂದರಾಜು ರವರು ತೋರಿಸಿದ ಸ್ಥಳದಲ್ಲಿ ಬೆ. 10.00 ರಿಂದ 11.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈಗ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ
ಗುಂಡ್ಲುಪೇಟೆ.